**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ: 31/2024**

**ಚಾ.ಸಾಃ 1, ಫ್ರಾ.ಸಾಃ 1**

| | |
|---|---|
| ಸಾಕ್ಷಿದಾರನ ಹೆಸರು | ಕೃಷ್ಣ ಹರಿಕಂತ್ರ |
| ತಂದೆಯ ಹೆಸರು | ಅನಂತ ಹರಿಕಂತ್ರ |
| ವಯಸ್ಸು | 25 ವರ್ಷಗಳು |
| ಉದ್ಯೋಗ | ಮೀನುಗಾರಿಕೆ |
| ವಾಸ್ತವ್ಯ | ಧಾರೇಶ್ವರ, ಕುಮಟಾ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 24-04-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುತ್ತೇನೆ.

ದಿನಾಂಕ 13-11-2023 ರಂದು ನಾನು ಮನೆಯಿಂದ ಮಂಕಿಯಲ್ಲಿರುವ ಅಜ್ಜಿಮನೆಗೆ ಬೈಕಿನಲ್ಲಿ ಹೋಗುತ್ತಿದ್ದೆ. ಅದೇ ಕಾಲಕ್ಕೆ ನನ್ನ ಸ್ನೇಹಿತನಾದ ವಿನಾಯಕ ಹರಿಕಂತ್ರರವರು ಇನ್ನೊಂದು ಬೈಕಿನಲ್ಲಿ ಮಂಕಿ ಕಡೆಗೆ ಬರುತ್ತಿದ್ದರು. ಆತನ ಜೊತೆಯಲ್ಲಿ ಶರತ್ ಎಂಬುವವರು ಬೈಕಿನ ಹಿಂಬದಿಯಲ್ಲಿ ಕುಳಿತಿದ್ದರು. ಬೈಕನ್ನು ವಿನಾಯಕ ಚಲಾಯಿಸುತ್ತಿದ್ದರು. ಸುಮಾರು ಸಂಜೆ 06-50 ರ ಸಮಯದಲ್ಲಿ ಕರ್ಕಿ ರೈಲ್ವೇ ಸ್ಟೇಶನ್ ಹತ್ತಿರ ಹೋಗುತ್ತಿದ್ದಾಗ ಹೊನ್ನಾವರ ಕಡೆಯಿಂದ ಕುಮಟಾ ಕಡೆಗೆ ಒಂದು ಕಾರು ಬರುತ್ತಿದ್ದು ಸದರಿ ಕಾರು ವೇಗವಾಗಿ ಬರುತ್ತಿತ್ತು. ಕಾರಿನ ಚಾಲಕ ಕಾರಿಗೆ ಯಾವುದೇ ಇಂಡಿಕೇಟರನ್ನು ಹಾಕದೇ ರೈಲ್ವೆ ಸ್ಟೇಶನ್ ಕಡೆಗೆ ಹೋಗಲು ಏಕಾ ಏಕಿ ಬಲಕ್ಕೆ ತಿರುಗಿಸಿದರು. ಆ ವೇಳೆಗೆ ಕುಮಟಾ ಕಡೆಯಿಂದ ಬರುತ್ತಿದ್ದ ವಿನಾಯಕರವರು ಎದುರಿನಲ್ಲಿ ಬರುತ್ತಿದ್ದ ಕಾರು ಏಕಾಏಕಿ ಬಲಕ್ಕೆ ತಿರುಗಿಸಿಕೊಂಡಾಗ ಅವರೂ ಸಹ ಬೈಕನ್ನು ಬಲಕ್ಕೆ ತೆಗೆದುಕೊಂಡಿದ್ದು ಆದರೂ ಕಾರು ಚಾಲಕ ಬಲಕ್ಕೆ ತಿರುಗಿಸುವಾಗ ವಿನಾಯಕರವರ ಬೈಕಿಗೆ ಡಿಕ್ಕಿಪಡಿಸಿದರು. ಬೈಕಿನಲ್ಲಿದ್ದವರು ಕೆಳಗೆ ಬಿದ್ದರು. ನಾನು ಹೋಗಿ ನೋಡಲಾಗಿ ವಿನಾಯಕರವರ ತಲೆಗೆ ಪೆಟ್ಟು ಬಿದ್ದು ಕಿವಿಯಲ್ಲಿ ರಕ್ತ ಬರುತ್ತಿತ್ತು. ಶರತ್‌ರವರ ಕಣ್ಣಿನ ಹತ್ತಿರ ಗಾಯ ಆಗಿತ್ತು. ನಾನು ಕಾರು ನೋಡಲಾಗಿ ನ್ಯಾಯಾಲಯದ ಮುಂದಿರುವ ಆರೋಪಿ ಕಾರಿನ ಚಾಲಕರಾಗಿದ್ದರು. ಸದರಿ ಕಾರಿನಲ್ಲಿ ಒಬ್ಬ ಹೆಂಗಸು ಮತ್ತು 2 ಜನ ಮಕ್ಕಳು ಇದ್ದರು. ಆ ಎರಡು ಮಕ್ಕಳಿಗೂ ಪೆಟ್ಟಾಗಿತ್ತು. ಗಾಯಾಳುಗಳನ್ನು ಹೊನ್ನಾವರದ ಸರಕಾರಿ ಆಸ್ಪತ್ರೆಗೆ ಸೇರಿಸಿ ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಶರತ್‌ರವರನ್ನು ಹೆಚ್ಚಿನ ಚಿಕಿತ್ಸೆಗೆ ಕಾರವಾರಕ್ಕೆ ಕರೆದುಕೊಂಡು ಹೋಗಲಾಯಿತು. ವಿನಾಯಕರವರನ್ನು ಉಡುಪಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ವಿನಾಯಕ 3 ದಿನಗಳ ನಂತರ ಮೃತಪಟ್ಟಿರುತ್ತಾರೆ.

ಅಪಘಾತ ಆದ ಮರು ದಿನ ಪೋಲಿಸರು ಘಟನಾ ಸ್ಥಳಕ್ಕೆ ನನ್ನನ್ನು ಕರೆಸಿದ್ದು ನಾನು ತೋರಿಸಿದ ಅಪಘಾತದ ಸ್ಥಳದಲ್ಲಿ ಚಾಸಾ-2 ಮತ್ತು 3 ರ ಸಮಕ್ಷಮ ಪೋಲಿಸರು ಸ್ಥಳ ಪಂಚನಾಮೆ ಮಾಡಿ, ಸ್ಥಳದಲ್ಲಿ ಒಂದು ನಕಾಶೆ ತಯಾರಿಸಿರುತ್ತಾರೆ ಮತ್ತು ಸ್ಥಳದಲ್ಲಿ ಮೂರು ಫೋಟೋ ತೆಗೆದಿರುತ್ತಾರೆ. ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-4 ರಿಂದ 6 ಎಂದು ಗುರುತಿಸಲಾಯಿತು.

ತದನಂತರ ಪೋಲಿಸರು ಠಾಣೆಗೆ ಕರೆಸಿದ್ದು ಠಾಣೆಯಲ್ಲಿ ಅಪಘಾತಕ್ಕೊಳಗಾದ ಕಾರು ಮತ್ತು ಬೈಕು ಇದ್ದು ನಾನು ಅವುಗಳನ್ನು ಗುರುತಿಸಿರುತ್ತೇನೆ. ಪೋಲಿಸರು ಅವುಗಳನ್ನು ಫೋಟೋ ತೆಗೆದು ಅಮಾನತ್ತುಪಡಿಸಿಕೊಂಡಿರುತ್ತಾರೆ. ಅಮಾನತ್ತು ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-7 ಎಂದು, ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. 4 ಫೋಟೋಗಳನ್ನು ನಿಪಿ-8 ರಿಂದ 11 ಎಂದು ಗುರುತಿಸಲಾಯಿತು. ಅಪಘಾತಪಡಿಸಿದ ಕಾರಿನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯು ಕಾರನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ಇಂಡಿಕೇಟರ್ ಹಾಕದೇ ಏಕಾಏಕಿ ಬಲಕ್ಕೆ ತಿರುಗಿಸಿದ್ದರಿಂದ ಆರೋಪಿ ತಪ್ಪಿನಿಂದ ಅಪಘಾತವಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ವಿನಾಯಕರವರು ಓಡಿಸುತ್ತಿದ್ದ ಬೈಕು ಆತನ ಅಣ್ಣನಿಗೆ ಸೇರಿಸಿದ್ದು ಆತನಿಗೆ ಬೈಕ್ ಓಡಿಸಲು ಲೈಸನ್ಸ ಇದೆ. ನಾನು ಓಡಿಸುತ್ತಿದ್ದ ಬೈಕ್ ಆಗಿದ್ದು ನನಗೂ ಸಹ ಬೈಕ್ ಓಡಿಸಲು ಲೈಸನ್ಸ ಇದೆ. ಬೈಕ್ ಸವಾರರು ರಾಷ್ಟ್ರೀಯ ಹೆದ್ದಾರಿಯ ಎಡಬದಿಯಲ್ಲಿ ಹೋಗಬೇಕು ಎಂದರೆ ಸರಿ. ಆ ದಿನ ನಾವು ಕುಮಟಾ ಹೊನ್ನಾವರ ರಾಷ್ಟ್ರೀಯ ಹೆದ್ದಾರಿಯ ಎಡಬದಿಯಲ್ಲಿ ಹೋಗುತ್ತಿದ್ದೆವು. ರಸ್ತೆಯ ಎಡ ಅಂಚಿನಿಂದ 2 ಅಥವಾ 3 ಅಡಿ ದೂರದಲ್ಲಿ ಬೈಕ್ ಓಡಿಸುತ್ತಿದ್ದರು. ವಿನಾಯಕ ನನಗಿಂತ 15 ಅಡಿ ಮುಂದೆ ಬೈಕ್ ಓಡಿಸುತ್ತಿದ್ದ. ಆತ ಸಹ ರಾಷ್ಟ್ರೀಯ ಹೆದ್ದಾರಿಯ ಎಡಬದಿಯಲ್ಲಿ ಬರುತ್ತಿದ್ದ. ಸದರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವಾಗ ಎದುರಿನಲ್ಲಿ ಬಲಭಾಗದಲ್ಲಿ ಬರುವ ವಾಹನಗಳು ಕಾಣುತ್ತಿರುತ್ತವೆ ಎಂದರೆ ಸರಿ. ರೈಲ್ವೆಸ್ಟೇಶನ್ ಹತ್ತಿರದಲ್ಲಿ ನಮ್ಮ ಎದುರುಗಡೆ ಯಾವುದೇ ವಾಹನಗಳು ಹೋಗುತ್ತಿರಲಿಲ್ಲ. ಅಪಘಾತ ಆಗುವ ಪೂರ್ವದಲ್ಲಿ ಸುಮಾರು 15 ಅಡಿ ದೂರದಲ್ಲಿ ಕಾರು ಬಂದಿದ್ದನ್ನು ನಾನು ನೋಡಿರುತ್ತೇನೆ. ನಾನು ನೋಡಿದಾಗ ಸದರಿ ಕಾರು ನಮ್ಮ ಎದುರಿಗಿನ ಪಕ್ಕದ ರಸ್ತೆಯಲ್ಲಿ ಡಿವೈಡರ್ ಪಕ್ಕದಲ್ಲಿ ಬರುತ್ತಿದ್ದುದನ್ನು ನೋಡಿದ್ದೇನೆ. ಆದರೆ ಅದು ನಮ್ಮ ಸ್ಥಳದಿಂದ ಎಷ್ಟು ಅಡಿ ದೂರ ಅಂತ ಹೇಳಲಾಗುವುದಿಲ್ಲ. ರೈಲ್ವೆ ಸ್ಟೇಶನ್ ಹತ್ತಿರ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ವಾಹನಗಳನ್ನು ನಿಲ್ಲಿಸಲು ಸುಮಾರು 5 ಅಡಿ ಅಗಲದಷ್ಟು ಜಾಗವನ್ನು ಬಿಡಲಾಗಿದೆ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿಯಲ್ಲಿ ನಾವು

ಹೋಗುತ್ತಿದ್ದ ರಾಷ್ಟ್ರೀಯ ಹೆದ್ದಾರಿಯು ಒಂದು ಭಾಗದಲ್ಲಿ ಸುಮಾರು 30 ಅಡಿ ಅಗಲ ಇದೆ. ಆರೋಪಿಯು ಕಾರನ್ನು ಏಕಾಏಕಿ ಬಲಕ್ಕೆ ತಿರುಗಿಸಿ ರಾಷ್ಟ್ರೀಯ ಹೆದ್ದಾರಿಯ ಮಧ್ಯದಲ್ಲಿರುವ ಡಿವೈಡರ್ ಗ್ಯಾಪನಿಂದ ಸುಮಾರು 5 ಅಡಿಯಷ್ಟು ಬಲಕ್ಕೆ ಬಂದಿದ್ದರು. ಕಾರು ಬಲಕ್ಕೆ ಬಂದಿದ್ದನ್ನು ನೋಡಿ ವಿನಾಯಕರವರು ಸ್ವಲ್ಪ ಬ್ರೇಕ್ ಹಾಕಿರಬಹುದು ಆದರೆ ತನ್ನ ಬೈಕನ್ನು ಬಲಭಾಗಕ್ಕೆ ತಿರುಗಿಸಿಕೊಂಡಿರುತ್ತಾರೆ. ವಿನಾಯಕ ಮೊದಲು ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದು ಏಕಾ ಏಕಿ ಕಾರು ಬಲಭಾಗಕ್ಕೆ ತಿರುಗಿದ್ದರಿಂದ ಆತನೂ ಸಹ ಬೈಕನ್ನು ಬಲಭಾಗಕ್ಕೆ ತಿರುಗಿಸಿಕೊಂಡಿದ್ದು, ಆತ ಹೋಗುತ್ತಿದ್ದ ರಸ್ತೆಯ ಸುಮಾರು 20 ಅಡಿ ಬಲಭಾಗಕ್ಕೆ ತೆಗೆದುಕೊಂಡಿರಬಹುದು. ಅಪಘಾತ ಆದಾಗ ಕಾರಿನ ಎಡಭಾಗದ ಹಿಂದಿನ ಬಾಗಿಲು ಬೈಕಿಗೆ ಡಿಕ್ಕಿಪಡಿಸಿರುತ್ತದೆ. ವಿನಾಯಕರವರೇ ಕಾರಿಗೆ ಗುದ್ದಿದ್ದಾರಾ ಅಂದರೆ ಆತ ಗುದ್ದಿಲ್ಲ. ಕಾರಿನ ಹಿಂಬಾಗಿಲು ಆತನಿಗೆ ಡಿಕ್ಕಿಯಾಗಿರುತ್ತದೆ. ಡಿಕ್ಕಿಯಾದಾಗ ಬೈಕಿ ಅಪಘಾತ ಆದ ಸ್ಥಳದಲ್ಲೇ ಬಿದ್ದಿರುತ್ತದೆ. ದೂರನ್ನು ನಾನೇ ಸ್ವಂತವಾಗಿ ಬರೆದಿರುತ್ತೇನೆ. ನಾನು ನನ್ನ ದೂರಿನಲ್ಲಿ ವಿನಾಯಕ ರಾಷ್ಟ್ರೀಯ ಹೆದ್ದಾರಿಯ ಬಲಬದಿಯ ಲೇನ್‌ನಲ್ಲಿ ಬೈಕನ್ನು ಚಲಾಯಿಸಿಕೊಂಡು ಹೊರಟ ಎಂದು ಬರೆಸಿರುತ್ತೇನೆ. ಆ ದಿನ ನಾವು ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುತ್ತಿರುವಾಗ ಯಾವುದಾದರೂ ವಾಹನಗಳನ್ನು ಓವರಟೇಕ್ ಮಾಡಬೇಕಾದರೆ ಬಲಬದಿಯ ಲೇನನಲ್ಲಿ ಬಂದಿರುತ್ತೇವೆ. ನಾವು ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರಾರಂಭದಲ್ಲಿ ಬಲದಿಂದ ಹೊರಟು ಎಡಭಾಗಕ್ಕೆ ಬಂದಿರುತ್ತೇವೆ.

ಅಪಘಾತದ ಪೂರ್ವದಲ್ಲಿ ಸುಮಾರು 25 ಮೀಟರ್ ಹಿಂದೆ ರಾಷ್ಟ್ರೀಯ ಹೆದ್ದಾರಿಯ ಎಡಬದಿಯ ಲೇನ್‌ನಲ್ಲಿ ಹೋಗುತ್ತಿದ್ದೆವು. ಆ ದಿನ ಆರೋಪಿಯು ತನ್ನ ಕಾರನ್ನು ರಾಷ್ಟ್ರೀಯ ಹೆದ್ದಾರಿಯ ಮಧ್ಯದ ಡಿವೈಡರ ಗ್ಯಾಪನಲ್ಲಿ ಬಲಕ್ಕೆ ತಿರುಗಿಸಿಕೊಂಡು ಮುಂದೆ ರೈಲ್ವೆ ಸ್ಟೇಶನ ಕಡೆಗೆ ಹೋಗಲು ಕಾರನ್ನು ನಿಲ್ಲಿಸಿಕೊಂಡು ನಿಂತಿದ್ದಾಗ ವಿನಾಯಕರವರೇ ಬೈಕನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ನಿಂತಿದ್ದ ಕಾರಿಗೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಕಾರಿನ ಹಿಂಭಾಗದ ಡೋರ್ ಸ್ವಲ್ಪ ಭಾಗ ಒಳಕ್ಕೆ ಹೋಗಿತ್ತು. ವಿನಾಯಕರವರ ತಪ್ಪಿನಿಂದಲೇ ಅಪಘಾತವಾಗಿದೆ ಎನ್ನುವ ವಿಚಾರ ಗೊತ್ತಿದ್ದರೂ ಆತನ ಕುಟುಂಬದವರಿಗೆ ಪರಿಹಾರ ಸಿಗಲಿ ಎನ್ನುವ ಕಾರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಂಚನಾಮೆ ಕಾಲಕ್ಕೆ ಪೋಲೀಸರು ನನ್ನ ಮುಂದೆ ಅಳತೆ ಮಾಡಿಲ್ಲ. ಅಪಘಾತದ ಸ್ಥಳವನ್ನು ಡಿವೈಡರ್ ಗ್ಯಾಪ್‌ನ ಮಧ್ಯದಿಂದ 5 ಫೂಟ್ ಅಂತರದಲ್ಲಿ ತೋರಿಸಿರುತ್ತೇನೆ. ಸದರಿ ಸ್ಥಳದಲ್ಲಿ ಬೈಕಿನ ಇಂಡಿಕೇಟರ್, ಗಾಜಿನ ಚೂರುಗಳು ಇದ್ದವು. ಇಂಡಿಕೇಟರ್ ಚೂರುಗಳನ್ನು ಪೋಲೀಸರು ತೆಗೆದುಕೊಂಡರೋ ಇಲ್ಲವೋ ನನಗೆ ಗೊತ್ತಿಲ್ಲ. ಪಂಚನಾಮೆಯ ಕಾಲಕ್ಕೆ ಡಿವೈಡರ್ ಮಧ್ಯದಲ್ಲಿ ಒಂದು ಚಪ್ಪಲಿ ಬಿದ್ದಿತ್ತು. ಅದು ಮೃತ ವಿನಾಯಕ ಅವರ ಚಪ್ಪಲಿಯಾಗಿತ್ತು. ಅಪಘಾತವಾದ ಸ್ಥಳದಲ್ಲಿ ಹೆಲ್ಮೆಟ್ ಬಿದ್ದಿತ್ತು. ಅದನ್ನು ನಾನು ತೆಗೆದುಕೊಂಡು ಹೋಗಿದ್ದೇನೆ. ಪೋಲೀಸರಿಗೆ ಕೊಟ್ಟಿರುವುದಿಲ್ಲ. ಅಪಘಾತವು ಡಿವೈಡರ ಗ್ಯಾಪನ ಮಧ್ಯದಲ್ಲಿ ಆರೋಪಿ ಕಾರು ನಿಲ್ಲಿಸಿಕೊಂಡಿದ್ದ ಸ್ಥಳದಲ್ಲಿ ಆಗಿದೆ ಎಂದರೆ ಸರಿಯಲ್ಲ.

ಸದರಿ ವಿಚಾರ ನನಗೆ ಗೊತ್ತಿದ್ದರೂ ರಸ್ತೆಯ ಮೇಲೆ ಅಪಘಾತವಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**